| ಕಾರ್ಯಕ್ರಮ | ಬಿ.ಎ. |
| --- | --- |
| ಸೆಮಿಸ್ಟರ್ | ತೃತೀಯ |
| ಪತ್ರಿಕೆ | ಕನ್ನಡ ಸೊಲ್ಲರಿಮೆ ಭಾಗ-1 |
| ವಿಷಯ | ಐಚ್ಛಿಕ ಕನ್ನಡ |
| ವಿಶ್ವವಿದ್ಯಾನಿಲಯ | ಕುವೆಂಪು ವಿ.ವಿ., ಶಂಕರಘಟ್ಟ |
| ಅವಧಿ | 1 |

# ಹಿಂದಿನ ತರಗತಿಗಳ ಪುನರ್ಮನನ

- ಸೊಲ್ಲರಿಮೆಯ ಸ್ವರೂಪದ ಅವಲೋಕನ
- ಪ್ರತಿ ಭಾಷೆಯ ಸೊಲ್ಲರಿಮೆ ನಿಯಮಗಳು ಭಿನ್ನ
- ನಾವು ಆಡುವ ಮಾತಿಗೂ ಬರಹಕ್ಕೂ ವ್ಯತ್ಯಾಸ
- ಏಕೆಂದರೆ ಅದರ ಗುರಿ, ಉದ್ದೇಶಗಳು ಭಿನ್ನವಾಗಿರುತ್ತದೆ.
- ಇಂದಿನ ಸಂದರ್ಭದಲ್ಲಿ ಮಾತು ಮತ್ತು ಬರಹಗಳು ಒಟ್ಟೊಟ್ಟಿಗೆ ಸಾಗುತ್ತದೆ
- ಇವುಗಳಿಗೆ ಸಂಬಂಧಿಸಿದ ಪ್ರಶ್ನೆಗಳ ಮೂಲಕ ಹಿಂದಿನ ತರಗತಿಯ ಅವಲೋಕನ

# ಕನ್ನಡ ಸೊಲ್ಲರಿಮೆಯ ಸ್ವರೂಪ

## ಘಟಕ-9

## ಸೊಲ್ಲರಿಮೆಯ ಪ್ರಯೋಜನಗಳು

# ಕಲಿಕೆಯ ಉದ್ದೇಶಗಳು

- ಯಾವುದೇ ಭಾಷೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾದರೆ ಸೊಲ್ಲರಿಮೆ ನಿಯಮಗಳ ಜ್ಞಾನ ಅತಿ ಮುಖ್ಯ.
- ಭಾಷೆ ಪರಂಪರೆಯನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.
- ಭಾಷೆಯ ಸರಿಯಾದ ಜ್ಞಾನವಿಲ್ಲದಿದ್ದರೆ ಅರ್ಥವೂ ಅಪಾರ್ಥವಾಗಬಹುದು.
- ನಮ್ಮ ಸರ್ವತೋಮುಖ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.
- ಮನುಷ್ಯನ ಸಂವಹನದಲ್ಲಿ ಮುಖ್ಯ ಸ್ಥಾನ

# ಕನ್ನಡ ಸೊಲ್ಲರಿಮೆಯ ಪ್ರಯೋಜನಗಳು

- ಕೇಶಿರಾಜ ವಾಕ್ಯದಿಂದ ಪದ, ಪದದಿಂದ ಅರ್ಥ, ಅರ್ಥದಿಂದ ತತ್ವ, ತತ್ವದಿಂದ ಮೋಕ್ಷ ಎಂದಿದ್ದಾನೆ.
- ಭಾಷೆಯ ಚೌಕಟ್ಟಿಗೆ ನಿಯಮಗಳು ಬೇಕು. ಪದವಿಭಜನೆ ಅರ್ಥಸಹಿತವಾಗಿರಬೇಕು.
- ಇಲ್ಲದಿದ್ದರೆ ಪದವಿಭಜನೆಯಲ್ಲಿ ದೋಷ ಉಂಟಾಗಿ ಅರ್ಥ ವ್ಯತ್ಯಾಸ ಕಂಡು ಬರುತ್ತದೆ.
- ಸೊಲ್ಲರಿಮೆಯ ಪ್ರಯೋಜನಗಳು ಹೀಗಿವೆ

1. ಸೊಲ್ಲರಿಮೆ ಯಾವಾಗಲೂ ಭಾಷೆಯ ಒಳರಚನೆ ಚೌಕಟ್ಟನ್ನು ಕಾಪಾಡಿಕೊಳ್ಳುತ್ತದೆ.

•ಗ್ಲೀಸನ್ ಎಂಬ ವಿದ್ವಾಂಸ ‘ ಭಾಷೆಯ ಸ್ವರೂಪವನ್ನು ಅದರ ಪ್ರಾಯೋಗಿಕ ನಿಯಮಗಳನ್ನು ಸೂತ್ರ ಬದ್ಧವಾಗಿ ವಿವರಿಸಿ ಅದರ ಮರ್ಯಾದೆಯನ್ನು ರಚನಾತ್ಮಕ ತಳಹದಿಯನ್ನು ಕಾಪಾಡಿಕೊಳ್ಳುವುದೇ ಸೊಲ್ಲರಿಮೆಯ ಕಾರ್ಯವಾಗಿದೆ’ ಎಂದಿದ್ದಾನೆ.

2. ಬೇರೆಯವರು ಆಡುವ ಮಾತು ಅರ್ಥವಾಗಬೇಕಾದರೆ ಆ ಭಾಷೆಯ ಪದಸಿದ್ಧಿಮಾಡಿಕೊಂಡು ವ್ಯವಹರಿಸಬೇಕು.

•ಇವುಗಳ ಕಲ್ಪನೆ ಇಲ್ಲದೆ ಹೋದರೆ ಅಸ್ಪಷ್ಟತೆ, ಅಪಾರ್ಥಗಳು ಉಂಟಾಗುತ್ತದೆ.

3.ನುಡಿಯನ್ನು ಒಂದು ಕಸುಬಾಗಿ ಮಾಡಿಕೊಳ್ಳಲು ಇದರಿಂದ ವಿಫುಲವಾದ ಅವಕಾಶಗಳಿವೆ.

•ಕಾರ್ಯಕ್ರಮ ನಿರೂಪಕರಾಗ ಬಯಸು ವವರಿಗೆ ಮಾತುಗಾರರಾಗ ಬಯಸುವವರಿಗೆ ಸೊಲ್ಲರಿಮೆ ಜ್ಞಾನ ಅಗತ್ಯ.

4.ಅನ್ಯಭಾಷೆಯನ್ನು ಕಲಿಯಲು ಬಯಸುವವರು ಮೊದಲು ಆ ಭಾಷೆಯ ನಿಯಮಗಳನ್ನು ಅರ್ಥೈಸಿಕೊಂಡಿರಬೇಕು.

- ಒಂದಕ್ಕಿಂತ ಹೆಚ್ಚು ಭಾಷೆ ಕಲಿಯುವವರಿಗೆ ಮೊದಲು ತನ್ನ ಮಾತೃಭಾಷೆಯನ್ನು ಸರಿಯಾಗಿ ಕಲಿಯಬೇಕು.

5. ಯಾವುದೇ ಎರಡು ಭಾಷೆಯಲ್ಲಿ ಪರಿಣಿತಿಹೊಂದಿದವರು ಅನುವಾದ ಕಾರ್ಯದಲ್ಲಿ ತೊಡಗಿಕೊಳ್ಳಬಹುದು.

- ಮಾತೃಭಾಷೆಯಲ್ಲಿ ಬಂದ ಕೃತಿಗಳನ್ನು ಅನ್ಯಭಾಷೆಗಳಿಗೂ, ಅನ್ಯಭಾಷೆಯ ಕೃತಿಗಳನ್ನು ಮಾತೃಭಾಷೆಯಲ್ಲೂ ಅನುವಾದಿಸಬಹುದು.

6.ಬರಹ ಮತ್ತು ಮಾತಿನ ಜಾಣ್ಮೆ ಬೆಳೆಸಿ ಕೊಳ್ಳುವವರಿಗೆ ಸೊಲ್ಲರಿಮೆ ತಿಳುವಳಿಕೆ ಮುಖ್ಯ.

- ಶಬ್ದಕೋಶ ರಚನಾಕಾರರಿಗೂ, ಕವಿಗಳಿಗೂ ಗಾಯಕರಿಗೂ ಪದ ಪರಿಜ್ಞಾನ ಒದಗಿಸುವುದು.

7. ಅರಿವಿಗೆ ಎಟುಕದ ಕಟ್ಟಲೆಗಳ ಜ್ಞಾನವನ್ನು ಮಾತಿನಲ್ಲಿ ವಿವರಿಸುವವರು ವೈಯಾಕರಣಿಗಳು .

- ಯಾವುದೇ ಭಾಷೆಯಲ್ಲಿನ ನಿಯಮಗಳನ್ನು ನಾವು ಪರಾಮರ್ಶೆ ಮಾಡಬೇಕಾದರೂ ಕೂಡ ನಮಗೆ ಸೊಲ್ಲರಿಮೆ ಜ್ಞಾನ ಅವಶ್ಯಕ.
- ಸೊಲ್ಲರಿಮೆಯಲ್ಲಿ ತಜ್ಞತೆ ಪಡೆಯ ಬೇಕೆನ್ನುವವರಿಗೂ ಕೂಡ ಅದರ ಮೇಲಿನ ಪ್ರಭುತ್ವ ಪ್ರಮುಖವಾದುದು.

# ಸಾರಾಂಶ

- ಯಾವುದೇ ಒಂದು ಭಾಷೆಯ ನಿಯಮಗಳು ತಿಳಿಯದಿದ್ದರೆ ಆ ಭಾಷೆಯನ್ನು ಕ್ರಮಬದ್ಧವಾಗಿ ಬಳಸಲು ಸಾಧ್ಯವಿಲ್ಲ.
- ಸೊಲ್ಲರಿಮೆಯನ್ನು ಕಲಿಯುವುದರಿಂದ ಹಲವಾರು ಪ್ರಯೋಜನಗಳನ್ನು ಪಡೆಯಬಹುದು.
- ಭಾಷೆಯ  ಒಳರಚನೆಯನ್ನು ತಿಳಿದುಕೊಂಡು ಕಾಲದಿಂದ ಕಾಲಕ್ಕೆ ಭಾಷೆಯ ರಚನೆಯಲ್ಲಿ ಉಂಟಾದ ಬದಲಾವಣೆಯನ್ನು ಗಮನಿಸಬಹುದು.

1.ಅರ್ಥದಿಂದ ----- ದೊರೆಯುತ್ತದೆ .

ಅ) ನೆಮ್ಮದಿ

ಆ) ತತ್ವ

ಇ)ಮೋಕ್ಷ

ಈ) ವಾಕ್ಯ

ಉತ್ತರ: ಆ) ತತ್ವ

2. ಭಾಷೆಯ ಪ್ರಾಯೋಗಿಕ ನಿಯಮಗಳನ್ನು ಸೂತ್ರ ಬದ್ಧವಾಗಿ ವಿವರಿಸಿದ ವಿದ್ವಾಂಸ

ಅ) ಜಾನ್ಸನ್

ಆ) ಗ್ಲೀಸನ್

ಇ)ವಿಲಿಯಂ

ಈ) ಡೆರಿಡಾ

ಉತ್ತರ: ಆ) ಗ್ಲೀಸನ್

3. ಅನ್ಯಭಾಷಿಕರು ನಮ್ಮ ಭಾಷೆಯನ್ನು ತಿಳಿದುಕೊಳ್ಳಲು ಮೊದಲು ------- ಅಗತ್ಯವಿರಬೇಕು.

ಅ) ಭಾಷಾ ನಿಯಮಗಳ ಅರಿವು

ಆ) ಭಾಷೆಯ ಅರಿವು

ಇ) ಜನರ ಸಂಪರ್ಕ

ಈ) ಮೇಲಿನ ಎಲ್ಲವೂ

ಉತ್ತರ: ಅ) ಭಾಷಾ ನಿಯಮಗಳ ಅರಿವು

4. ಅರಿವಿಗೆ ಎಟುಕದ ಜ್ಞಾನವನ್ನು ಮಾತಿನಲ್ಲಿ ವಿವರಿಸುವವರನ್ನು

ಅ) ವ್ಯಾಕರಣಕಾರರು

ಆ) ನುಡಿಯರಿಗರು

ಇ) ಭಾಷಾಶಾಸ್ತ್ರಜ್ಞರು

ಈ) ಮೇಲಿನ ಎಲ್ಲವೂ

ಉತ್ತರ: ಈ) ಮೇಲಿನ ಎಲ್ಲವೂ

5.ನುಡಿಯನ್ನು ಕಸುಬಾಗಿ ಮಾಡಿಕೊಳ್ಳಲು ಯಾವ ಕ್ಷೇತ್ರದಲ್ಲಿ ವಿಪುಲವಾದ ಅವಕಾಶಗಳಿವೆ

ಅ) ಕಾರ್ಯಕ್ರಮ ನಿರೂಪಕರು

ಆ) ಟೆಲಿ ಮಾರ್ಕೆಟಿಂಗ್

ಇ) ಸಾರ್ವಜನಿಕ ಸಂಪರ್ಕಾಧಿಕಾರಿ

ಈ) ಮೇಲಿನ ಎಲ್ಲವೂ

ಉತ್ತರ: ಈ) ಮೇಲಿನ ಎಲ್ಲವೂ